ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ ಬೆಂಗಳೂರು-560009**

ಸಂಖ್ಯೆ:ಸಿಎಸಿ.ಹ.ಕಾ.ವಿ.ಇ.1/2022-23 ದಿನಾಂಕ:03-06-2022

**ದರಪಟ್ಟಿ ಆಹ್ವಾನ ಪತ್ರ**

ವಿಷಯ: ಹಳೆಯ ಅನುಪಯುಕ್ತ ಕಾಗದಗಳು, ಬಳಕೆಯಾಗದ ಪ್ರಶ್ನೆಪತ್ರಿಕೆಗಳು ಮತ್ತು ಬಳಕೆಯಾಗದ ಓ.ಎಂ.ಆರ್ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡುವ ಕಾರ್ಯಕ್ಕೆ ದರಪಟ್ಟಿ ಆಹ್ವಾನಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಕೇಂದ್ರೀಕೃತ ದಾಖಲಾತಿ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗರಸ್ತೆ, ಬೆಂಗಳೂರು-09 ಈ ಕಛೇರಿಯ ವತಿಯಿಂದ ನಡೆಸಲಾದ ಪರೀಕ್ಷೆಗಳಲ್ಲಿ ಬಳಕೆಯಾಗದ ಪ್ರಶ್ನೆಪತ್ರಿಕೆಗಳು ಮತ್ತು ಓ.ಎಂ.ಆರ್ ಉತ್ತರ ಪತ್ರಿಕೆಗಳು ಮತ್ತು ಹಳೆಯ ಅನುಪಯುಕ್ತ ಕಾಗದಗಳನ್ನು ವಿಲೇವಾರಿ ಮಾಡುವ ಸಲುವಾಗಿ ಅರ್ಹ ಸಂಸ್ಥೆಗಳಿಂದ ವಿಲೇವಾರಿಗಾಗಿ ಈ ಕೆಳಕಂಡ ಷರತ್ತುಗಳನ್ವಯ ದರಪಟ್ಟಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ಭೇಟಿ ನೀಡಿ ಮಾಹಿತಿ ಪಡೆಯುವುದು.

ಮುಚ್ಚಿದ ಲಕೋಟೆಯ ಮೇಲೆ "ಹಳೆಯ ಕಾಗದದ ವಿಲೇವಾರಿಗಾಗಿ ದರಪಟ್ಟಿ" ಎಂಬುದಾಗಿ ನಮೂದಿಸಿ ದರಪಟ್ಟಿಯನ್ನು ಕೆಳಕಂಡ ನಮೂನೆಯಲ್ಲಿ ದಿನಾಂಕ:10-6-2022 ರ ಸಂಜೆ 5-00 ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.

ದರಪಟ್ಟಿ ನಮೂನೆ

| ಕ್ರ.ಸಂ | ಸಾಮಗ್ರಿಗಳು | ಪ್ರತಿ ಕೆ.ಜಿ.ಗೆ ದರ ರೂ | ಷರಾ |
|---|---|---|---|
| 1 | ಹಳೆ ಕಾಗದಗಳು / ಬಳಕೆಯಾಗದ ಪ್ರಶ್ನೆ ಪತ್ರಿಕೆಗಳು ಮತ್ತು ಬಳಕೆಯಾಗದ ಓ.ಎಂ.ಆರ್ ಉತ್ತರ ಪತ್ರಿಕೆಗಳು ಇತ್ಯಾದಿ | | |

**ಷರತ್ತುಗಳು:-**

1. ಈ ಪತ್ರದಲ್ಲಿ ಸೂಚಿಸಿರುವ ನಮೂನೆಯಲ್ಲಿ, ನಿಗಧಿತ ಕಾಲಮಿತಿಯ ಒಳಗೆ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಗೆ ಸಲ್ಲಿಸಬೇಕು.
2. ದರಪಟ್ಟಿಯೊಂದಿಗೆ ಇ.ಎಂ.ಡಿ ಮೊತ್ತ ರೂ.10,000/- ಮೊತ್ತಕ್ಕೆ "SPECIAL OFFICER CAC" ಇವರ ಹೆಸರಿನಲ್ಲಿ ಹುಂಡಿ ತೆಗೆದು ಸಲ್ಲಿಸಬೇಕು.
3. ದರಪಟ್ಟಿ ಸಲ್ಲಿಸುವ ಸಂಸ್ಥೆಯು ನಿಯಮಾನುಸಾರ ನೊಂದಣಿಯಾಗಿದ್ದು ಜಿ.ಎಸ್.ಟಿ ಸಂಖ್ಯೆ ಮತ್ತು ಪ್ಯಾನ್‌ಸಂಖ್ಯೆಯನ್ನು ಹೊಂದಿರುವುದು ಮತ್ತು ದರಪಟ್ಟಿಯಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ.
4. ಕಳೆದ 03 ವರ್ಷಗಳ ಅಂದರೆ 2019-20, 2020-21, 2021-22 ನೇ ಸಾಲಿನ IT RETURNS FILE ಮಾಡಿರುವುದು ಕಡ್ಡಾಯವಾಗಿದ್ದು. ಸದರಿ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
5. ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ಬಿಲ್ಲನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ನಿಯಮಾನುಸಾರ ಸರ್ಕಾರಕ್ಕೆ ಜಿ.ಎಸ್.ಟಿ ಮತ್ತು ಆದಾಯತೆರಿಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.
6. ಒಂದು ಸಂಸ್ಥೆಯವರು ಒಂದೇ ದರಪಟ್ಟಿ ಸಲ್ಲಿಸಬೇಕು.
7. ವಿಲೇವಾರಿ ಕಾರ್ಯವನ್ನು ಈ ಕಛೇರಿಯಿಂದ ಕಾರ್ಯಾದೇಶ ನೀಡಿದ 07 ದಿನಗಳ ಒಳಗಾಗಿ ನಿಮ್ಮ ಸ್ವಂತ ಖರ್ಚಿನಲ್ಲಿ ಪೂರ್ಣಗೊಳಿಸಬೇಕು. ಈ ಕಾರ್ಯಕ್ಕೆ ಈ ಕಛೇರಿಯಿಂದ ಯಾವುದೇ ಸಹಾಯಕರನ್ನಾಗಲೀ, ಸಾಗಾಣಿಕಾ ವೆಚ್ಚವನ್ನಾಗಲೀ ನೀಡುವುದಿಲ್ಲ.
8. ಗೋದಾಮಿನಲ್ಲಿರುವ ಎಲ್ಲಾ ಹಳೆಯ ಕಾಗದಗಳಿಗೂ ಸೂಚಿತ ದರವೇ ಅನ್ವಯವಾಗುತ್ತದೆ.
9. ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.

10. ಅರ್ಹ ಸಂಸ್ಥೆಯವರು ವಿಲೇವಾರಿಗೆ ಮೊದಲು ಈ ಕಛೇರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮೊದಲು ಖಾಲಿ ವಾಹನವನ್ನು ವೇ ಬ್ರಿಡ್ಜ್‌ನಲ್ಲಿ ತೂಕ ಮಾಡಿಸಿ, ತದನಂತರ ಅನುಪಯುಕ್ತ ಉತ್ತರ ಪತ್ರಿಕೆಗಳು ಮತ್ತು ರದ್ದಿ ಕಾಗದವನ್ನು ತುಂಬಿಸಿರುವ ವಾಹನವನ್ನು ತೂಕ ಮಾಡಿಸಬೇಕು.
11. ಆಯ್ಕೆಯಾದ ಸಂಸ್ಥೆಯವರು ಅಧಿಕಾರಿಗಳ ಸಮ್ಮುಖದಲ್ಲಿ ವಿಲೇವಾರಿಯ ದಿನ ತೂಕಕ್ಕೆ ಅನುಗುಣವಾಗಿ ಸೂಚಿತ ದರವನ್ನು ಲೆಕ್ಕಮಾಡಿ ಒಂದೇ ಬಾರಿಗೆ ಬ್ಯಾಂಕ್ ಹುಂಡಿಯ ಮೂಲಕ ಪಾವತಿಸಿದ ನಂತರವೇ ಅನುಪಯುಕ್ತ ಕಾಗದಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುವುದು.
12. ನಿಯಮಾನುಸಾರ ಅಂತಿಮವಾಗಿ ಅರ್ಹವಾದ ಸಂಸ್ಥೆಯು, ಈ ಕಛೇರಿಯಿಂದ ಕಾರ್ಯಾದೇಶ ಸ್ವೀಕರಿಸಿದ ಒಂದು ವಾರದೊಳಗೆ ಸಾಮಗ್ರಿಗಳ ವಿಲೇವಾರಿ ಮಾಡುವುದು. ವಿಳಂಬವಾದಲ್ಲಿ ಪ್ರತಿ ದಿನಕ್ಕೆ ರೂ.500/- ರಂತೆ ದಂಡವನ್ನು ಪಾವತಿಸಬೇಕಾಗಿರುತ್ತದೆ.
13. ಅತಿ ಹೆಚ್ಚು ದರವನ್ನು ನಮೂದಿಸಿ, ಈ ಕಛೇರಿಯಿಂದ ಸೂಚಿಸಿರುವ ಎಲ್ಲಾ ಷರತ್ತುಗಳನ್ನು ಪಾಲಿಸಿದ ಸಂಸ್ಥೆಯನ್ನು ಹೆಚ್-1 ಎಂದು ಗುರುತಿಸಿ ಆಯ್ಕೆ ಮಾಡಲಾಗುವುದು.
14. ಸಂಸ್ಥೆಗಳು ಈ ಕಾರ್ಯಕ್ಕೆ ಸಲ್ಲಿಸುವ ದರಪಟ್ಟಿಯನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ ಇವರಿಗೆ ಇರುತ್ತದೆ. ತಿರಸ್ಕೃತಗೊಂಡ ಸಂಸ್ಥೆಗೆ ದರಪಟ್ಟಿಯನ್ನು ತಿರಸ್ಕರಿಸಿರುವ ಬಗ್ಗೆ ಯಾವುದೇ ಪ್ರತ್ಯೇಕ ವಿವರಣೆಯನ್ನು ಈ ಕಛೇರಿಯಿಂದ ನೀಡಲಾಗುವುದಿಲ್ಲ. ತಿರಸ್ಕೃತಗೊಂಡ ಸಂಸ್ಥೆಯು ಸಲ್ಲಿಸಿರುವ ಇ.ಎಂ.ಡಿ ಹುಂಡಿಯನ್ನು 30 ದಿನಗಳ ಒಳಗಾಗಿ ಸಂಬಂದಿಸಿದ ಸಂಸ್ಥೆಯ ವಿಳಾಸಕ್ಕೆ ಹಿಂತಿರುಗಿಸಲಾಗುವುದು.

ವಿಶೇಷಾಧಿಕಾರಿಗಳು
ಕೇಂದ್ರೀಕೃತ ದಾಖಲಾತಿ ಘಟಕ

ಗೆ,

1. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2. ಈ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು